ಬೀದಿಗೆ ಎಳೆಯಬೇಡಿ ಎಂದೂ ಕೇಳಿಕೊಂಡಿದ್ದಾರೆ. ನಾನು ಕೂಡ ಇವರ ಅಸೋಸಿಯೇಷನ್ ನವರಿಗೆ ನಮ್ಮ ಪರಿಸ್ಥಿತಿ ಹೀಗೆ ಇದೆ ಇದರ ಬಗ್ಗೆ ವಿಚಾರ ಮಾಡುತ್ತಿದ್ದೇವೆ ಎಂದೂ ಅವರಿಗೆ ಹೇಳಿದ್ದೇನೆ. ಎನ್. ಜಿ. ಓ. ಅಸೋಸಿಯೇಷನ್‌ನವರು ನನ್ನ ಹತ್ತಿರ ಅನೇಕಸಲ ಬಂದಿದ್ದಾರೆ. ಅವರೊಡನೆ ಇವೆಲ್ಲಾ ವಿಚಾರಗಳನ್ನೂ ಕುರಿತು ಚರ್ಚೆ ಮಾಡಿದ್ದೇನೆ ಮತ್ತು ಎಷ್ಟು ಪ್ರಮಾಣದಲ್ಲಿ ಇದನ್ನು ಕಡಿಮೆ ಮಾಡಬಹುದು ಎನ್ನುವುದರ ಬಗೆಗೂ ಕೂಡ ಅವರೊಡನೆ ಮಾತನಾಡಿದ್ದೇನೆ. ಇದೇ ರೀತಿ ಶ್ರೀಮಾನ್ ಅರಕೇರಿಯವರೂ ಕೂಡ ನನ್ನ ಬಳಿಗೆ ಒಂದು ಡೆಪ್ಯುಟೇಷನ್ ಕರೆದುಕೊಂಡು ಬಂದು ಇದರ ವಿಚಾರವಾಗಿ ದೀರ್ಘವಾಗಿ ಪ್ರಸ್ತಾಪ ಮಾಡಿದರು ಮತ್ತು ಒಂದು ವಿವರವಾದ ಮೆಮೊರ್ಯಾಂಡಂನ್ನು ಕೂಡ ನನಗೆ ಕೊಟ್ಟಿದ್ದಾರೆ. ಇದನ್ನೂ ಪರಿಶೀಲನೆ ಮಾಡುತ್ತಿದ್ದೇನೆ ಎಂದು ಅವರಿಗೆ ಕೂಡ ಭರವಸೆ ಕೊಟ್ಟಿದ್ದೇವೆ. ಈಗ ಪ್ರಶ್ನೆ ಏನು ಬಂದಿರುತ್ತೆ ಎಂದರೆ ಈಗ ನಾವೇನು ಜನರನ್ನು ಹೊರಗೆ ಹಾಕಿದ್ದೇವೆ ಇವರೆಲ್ಲರಿಗೂ ಅಲ್ಟರ್‌ನೇಟೀವ್ ಹಾಬುಗಳನ್ನು ಹುಡುಕುವತನಕ ಪಿ.ಎಸ್. ಸಿ. ಅವರು ರೆಗ್ಯುಲರ್ ರೆಕ್ರೂಟ್‌ಮೆಂಟುಗಳನ್ನು ನಿಲ್ಲಿಸಬೇಕಾಗುತ್ತದೆ. ಅದರಂತೆ ಇನ್ನು ಒಂದು ವರ್ಷಕಾಲ ಆ ರೆಕ್ರೂಟ್‌ಮೆಂಟನ್ನೂ ಕೂಡ ನಿಲ್ಲಿಸುವುದಕ್ಕೆ ನಾವು ಪ್ರಯತ್ನ ಮಾಡತ್ತಿದ್ದೇವೆ. ಆದರೆ ಅತ್ತ ಪಿ.ಎಸ್.ಸಿ. ಅವರು ನೇಮಕ ಮಾಡುವುದು ಮತ್ತು ಇತ್ತಕಡೆ ಇವರನ್ನು ರೆಗ್ಯುಲರೈಜ್ ಮಾಡುವುದು ಈ ಎರಡೂ ಕೆಲಸಗಳನ್ನು ಒಂದೇಕಾಲಕ್ಕೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ನಾವೀಗ ಹೊರಗೆ ಹಾಕಿರತಕ್ಕೆ ಜನರಲ್ಲಿ ಎಷ್ಟು ಜನರನ್ನು ಎಲ್ಲೆಲ್ಲಿ ಅಬ್ಸಾರ್ಬ್ ಮಾಡಿಕೊಳ್ಳುವುದಕ್ಕೆ ಸಾಧ್ಯವಿದೆ ಎಂಬುದನ್ನು ಪರಿಶೀಲನೆ ಮಾಡುತ್ತಿದ್ದೇವೆ. ನಾನು ಇನ್ನು ಮಾನ್ಯ ಸದಸ್ಯರುಗಳಿಗೆ ಕಟ್ಟ ಕಡೆಯದಾಗಿ ಇಷ್ಟನ್ನು ಹೇಳುತ್ತಿದ್ದೇನೆ, ಈ ರೋಕರ್ ಕ್ಯಾಂಡಿಡೇಟ್ಸುಗಳ ವಿಚಾರದಲ್ಲಿ ಎಷ್ಟು ಅಭಿಮಾನ ಇವರೆಲ್ಲರಿಗೂ ಇದೆಯೋ ಅಷ್ಟೇ ಅಭಿಮಾನ ಅವರ ವಿಚಾರದಲ್ಲಿ ನನಗೂ ಮತ್ತು ನನ್ನ ಸಹೋದ್ಯೋಗಿಗಳಿಗೂ ಇದೆ. ಈ ಸಮಸ್ಯೆಯನ್ನು ನಾವು ತುಂಬಾ ಸಹಾನುಭೂತಿ ಮತ್ತು ಸಹನೆಗಳಿಂದ ಪರಿಶೀಲನೆ ಮಾಡುತ್ತೇವೆಂದು ಹೇಳುತ್ತಿದ್ದೇನೆ ಈ ಸಮಸ್ಯೆಯನ್ನು ಅದಷ್ಟೂ ಮುಂದಕ್ಕೆ ತಳ್ಳಿಕೊಂಡು ಹೋಗಬೇಕು ಎಂಬುದು ನನ್ನ ಉದ್ದೇಶವಲ್ಲ. ಆದಷ್ಟು ಬೇಗ ಇದನ್ನು ಇತ್ಯರ್ಥಮಾಡಬೇಕೆಂಬ ಇರಾದೆ ನಮಗೂ ಇದೆ ಆದರೆ ನಾವು ಮಾಡತಕ್ಕ ಕೆಲಸಗಳು ಕಾನೂನು ಬದ್ಧವಾಗಿರಬೇಕು, ಕ್ರಮಬದ್ಧವಾಗಿರಬೇಕು ಎಂಬ ದೃಷ್ಟಿಯಿಂದ ಪರಿಶೀಲನೆ ಮಾಡುತ್ತಿದ್ದೇವೆ. ಸಾಧ್ಯವಾದಮಟ್ಟಿಗೂ ಎಲ್ಲರಿಗೂ ಸಮಾಧಾನವಾಗುವಂಥ ಒಂದು ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಬಹುದು ಎಂಬ ಆಸೆಯನ್ನು ನಾನೂ ಕೂಡ ಇಟ್ಟುಕೊಂಡಿದ್ದೇನೆಂದು ತಮಗೆ ತಿಳಿಸುವುದಕ್ಕೆ ಇಚ್ಛಿಸುತ್ತೇನೆ. ಇಷ್ಟನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Miscellaneous Subjects to be taken up in the House

† ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಸ್ವಾಮಿ, ಅಧ್ಯಕ್ಷರೇ ನಾನು 3–4 ಸಾರ್ತಿ ಎದ್ದೆದ್ದು ಕುಳಿತೆ. ನಾನು ತಮ್ಮ ಆಫೀಸಿಗೆ ನಾಲ್ಕೈದು ನೋಟೀಸುಗಳನ್ನು ಕಳುಹಿಸಿದ್ದೆ. ಆ ನೋಟಿಸುಗಳಲ್ಲಿ ಒಂದು ಆ ಹಡಗಲಿಗೆ ಸಂಬಂಧಪಟ್ಟದ್ದು. ಅದನ್ನು ನಾನು ರೂಲ್ 163ಮೇರೆಗೆ ಕೊಟ್ಟಿದ್ದೆ. ಹಾಗೆ ನಾನು ಕೊಟ್ಟಿದ್ದ ಆ ನೋಟೀಸಿನ ಬಗ್ಗೆ ಈ ಸಭೆಯಲ್ಲಿ ಇನ್ನೂ ಏನೂ ಒಂದು ತೀರ್ಮಾನವಾಗದೆ ಇರುವಾಗ ಇದಕ್ಕೆ ಸಂಬಂಧಪಟ್ಟ ವಿದ್ಯಾ ಉಪಮಂತ್ರಿಗಳಾದ ಶ್ರೀ ಸೋಗಿ ಅವರು ಪತ್ರಿಕೆಗಳಲ್ಲಿ ಆ ಪತ್ರಿಕಾಕರ್ತಕರಿಗೆ ಉಂಟಾದ ಅನಾನುಕೂಲಗಳ ಬಗ್ಗೆ ವಿಷಾದವನ್ನು ವ್ಯಕ್ತಪಡಿಸತಕ್ಕ ಒಂದು ಹೇಳಿಕೆಯನ್ನು ಹೊರಡಿಸಿರುವುದಲ್ಲದೆ ಇವರೇ ಇಲ್ಲಿಂದ ಆ ಹಡಗಲಿ ತಾಲ್ಲೂಕಿನ ಬೋರ್ಡ್ ಥೇರ್ಮನ್ನರಿಗೆ ಒಂದು ತಂತಿಯನ್ನು ಕಳುಹಿಸಿ ನೀವು ಈ ರೀತಿ ಪತ್ರಿಕೆಗಳಲ್ಲಿ ಒಂದು ಹೇಳಿಕೆಯನ್ನು ಹೊರಡಿಸಿ ಎಂದು ತಿಳಿಸಿ, ಜೊತೆಗೆ ತಮ್ಮ ಒಂದು ಅನೀತಿಯುತವಾದ ಹೇಳಿಕೆಯನ್ನು ಬೇರೆ ಕೊಟ್ಟಿದ್ದಾರೆ. ಆ ಪತ್ರಿಕಾಕರ್ತರನ್ನು ಹಡಗಲಿಗೆ ಬರಬೇಕೆಂದು ಆಹ್ವಾನಿಸಿದವರಾದರೂ ಯಾರು? ಈ ಸೋಗಿಯವರೇ. ಆದರೆ ಮೇಲ್ಮನೆಯಲ್ಲಿ ಇದೇ ವಿಚಾರಕ್ಕೆ ಸಂಬಂಧಪಟ್ಟ ಒಂದು ಮೋಷನ್ ಅಲ್ಲಿ ಚರ್ಚೆಗೆ ಬಂದಿದ್ದಾಗ ಅಲ್ಲಿ ಮಾನ್ಯ ಸಚಿವರು ಅದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ನಾನು ಇಲ್ಲ ನೋಟೀಸನ್ನು ಅದಕ್ಕೂ ಮೊದಲೇ ಕೊಟ್ಟಿದ್ದೆನು. ಆದರೆ ನನ್ನ ನೋಟೀಸಿಗೆ ಇಲ್ಲಿ ಉತ್ತರವನ್ನು ಕೊಡದೆ ಮೇಲ್ಮನೆಯಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ನಮ್ಮ ರಾಜ್ಯಪಾಲರಾದ ಶ್ರೀ ಧರ್ಮವೀರ ಅವರನ್ನು ಹಡಗಲಿಯಲ್ಲಿ ಒಂದು ಸಮಾರಂಭಕ್ಕೆ ಆಹ್ವಾನಿಸಿದ್ದು, ಆ ಸಮಾರಂಭದ ಅಧ್ಯಕ್ಷತೆಯನು ಶ್ರೀ ಸೋಗಿಯವರೇ ವಹಿಸಬೇಕೆಂದು ಇದ್ದಂಥ ಒಂದು ಸಂದರ್ಭವಲ್ಲ, ಇನ್‌ಫರ್ಮೇಷನ್ ಆಫೀಸರ ಮೂಲಕ ಈ ಪತ್ರಿಕಾಕರ್ತರನ್ನು ಶ್ರೀ ಸೋಗಿ

(ಶ್ರೀ ವಾಟಾಳ್ ನಾಗರಾಜ್)

ಯವರೇ ಕರೆಸಿ ಅವರಿಗೆ ಅಪಮಾನ ಮಾಡಿದ್ದಾರೆ. ಅವರನ್ನು ಅಷ್ಟು ಬೇಜವಾಬ್ದಾರಿಯಿಂದ ಕಾಣುವುದಕ್ಕೆ ಇವರಿಗೆ ಮನಸ್ಸಾದರೂ ಹೇಗೆ ಬಂತು ? ತಾವಾಗೇ ಬರೆದು ಅವರನ್ನು ಕರೆಸಿ ಅವರಿಗೆ ಒಂದು ಮರ್ಯಾದೆಯನ್ನು ಕೊಡುವುದು ಬೇಡವೇ ? ಶ್ರೀ ಸೋಗಿಯವರು ಆ ಪತ್ರಿಕಾಕರ್ತರಿಗೆ ಒದಗಿಸಿದ ಒಂದು ಥಕ್ಕೋ ಸರ್ವೀಸಿನಲ್ಲಿ ಇಲ್ಲಿಂದ ಹೊರಟರೆ ಅವರಿಗೆ ಚಿತ್ರದುರ್ಗದಲ್ಲಿ ಊಟಕ್ಕೆ ವ್ಯವಸ್ಥೆಮಾಡಿದೆ ಎಂದು ಹೇಳಿದ್ದರು. ಅಲ್ಲೇನೂ ಮಾಡಿಯೇ ಇರಲಿಲ್ಲ. ಅಲ್ಲಿ ಅವರಿಗೆ ಒಂದು ತೊಟ್ಟು ನೀರೂ ಕೂಡ ಸಿಕ್ಕಲಿಲ್ಲ. ಅಲ್ಲಿಂದ ಅವರು ಹೊರಟು ರಾತ್ರಿಮೂರು ಗಂಟೆಗೆ ಹಡಗಲಯನ್ನು ತೇರಿದರು. ಅಲ್ಲಿಯೂ ಕೂಡ ಇವರಿಗೆ ಅನ್ನವೂ ಇಲ್ಲ, ನೀರೂ ಕೂಡ ಇಲ್ಲ. ಪತ್ರಿಕಾಕರ್ತರು ಅಲ್ಲಿಗೆ ಬಂದಿದ್ದಾರೆಂಬ ಸುದ್ದಿಯನ್ನು ಕೇಳಿದ ಮೇಲೂ ಶ್ರೀ ಸೋಗಿಯವರು ಯಾವುದೋ ಮನೆಯಲ್ಲಿ ಇನ್ಸ್‌ಪೀಟಾಟವಾಡುತ್ತಿದ್ದರು, ಎದ್ದು ಹೊರಗೆ ಬರಲೇ ಇಲ್ಲ. ಇವರು ಏಕೆ ಹೊರಗೆ ಬರಲಿಲ್ಲ? ಇವರು ಯಾವುದೋ ಅವತಾರದಲ್ಲಿದ್ದಿರಬೇಕು. ಅದಕ್ಕಾಗೇ ಇವರು ಆಗ ಹೊರಗೆ ಬರಲಿಲ್ಲ ಎಂದು ಕಾಣುತ್ತದೆ. ಪತ್ರಿಕಾಕರ್ತರಿಗೆ ಇಷ್ಟೊಂದು ಅಪಮಾನವೇ ? ಆ ಟಿ. ಬಿ. ಯಲ್ಲಿ ಆ ದಿವಸ ರಾಜ್ಯಪಾಲರಿಗೆ ವ್ಯವಸ್ಥೆಮಾಡಿದೆ ಎಂದು ಹೇಳಿರುವುದೆಲ್ಲಾ ಸುಳ್ಳು. ಅಲ್ಲಿ ಆ ರಾಜ್ಯಪಾಲರ ಕಾರ್ಯದರ್ಶಿಗಳಿಗೋ ಅಥವಾ ಉಪಕಾರ್ಯದರ್ಶಿಗಳಿಗೋ ರಿಜರ್ವ್ ಮಾಡಿರಬೇಕು. ಅದಕ್ಕೇ ಅಲ್ಲಿಂದ ಪತ್ರಿಕಾಕರ್ತರನ್ನು ಹೊರಕ್ಕೆ ತಳ್ಳಿಸಬೇಕೇ ? ಸರ್ಕಾರದವರಿಗೆ ಎಲ್ಲ ರೀತಿಯಲ್ಲೂ ಪಬ್ಲಿಸಿಟಿ ಬೇಕು, ಪತ್ರಿಕೆಗಳಲ್ಲಿ ಇವರ ಉದ್ದವಾದ ಹೇಳಿಕೆಗಳು ಬರಬೇಕು, ಆದರೆ ಅವರಿಗೆ ಮರ್ಯಾದೆಬೇಡ ? ಅವರಿಗೆ ಊಟ ಬೇಡ ವಸತಿ ಬೇಡ ? ಇದು ಉಪಮಂತ್ರಿಗಳ ನತ್ಕಾರ. ಸಾಲದ್ದಕ್ಕೆ ವಿಷಾದವನ್ನು ಬೇರೆ ವ್ಯಕ್ತಪಡಿಸಿದ್ದಾರೆ. ನಾನು ರೂಲ್ 163 ಪ್ರಕಾರ ನೋಟೀಸನ್ನು ಕೊಟ್ಟಿದ್ದರೂ ಅದನ್ನು ಲೆಕ್ಕಿಸದೆ ಈ ಸಭೆಯನ್ನೂ ಲೆಕ್ಕಿಸದೆ ಇವರು ಹೇಗೆ ಹೊರಗೆ ಹೇಳಿಕೆಯನ್ನು ಕೊಟ್ಟರು ? ಈ ಸಭೆಯಲ್ಲಿ ಆ ವಿಷಯ ತೀರ್ಮಾನವಾಗುವುದಕ್ಕೆ ಮೊದಲೇ ಹೇಗೆ ಹೊರಗಡೆ ಈ ನನ್ನ ನೋಟೀಸಿನ ವಿಚಾರದಲ್ಲಿ ಇವರು ಹೇಳಿಕೆಯನ್ನು ಕೊಟ್ಟರು ! * * *

4-00 P.M.

(MR. DEPUTY SPEAKER in the Chair)

ಶ್ರೀ ಎಲ್. ಶ್ರೀಕಂಠಯ್ಯ.—ಸ್ವಾಮಿ, ಈ ದಿನದ ಕಾರ್ಯಕಲಾಪಗಳಲ್ಲಿ ಇಲ್ಲದೇ ಇರುವಂಥ ವಿಷಯಗಳೆಲ್ಲಾ ಬರುತ್ತಾ ಇದೆ. ಈ ರೀತಿ ಆಗುತ್ತಾ ಹೋದರೆ ನಮ್ಮ ಸ್ಥಾನಮಾನಗಳೇನು ಎನ್ನುವುದನ್ನು ಸ್ಪಷ್ಟಪಡಿಸಬೇಕು ಅಥವಾ ಈಗ ಮಾಡುವ ಭಾಷಣ ಯಾವ ಕಾರ್ಯಕಲಾಪದಲ್ಲಿ ಇದೆ ಎನ್ನುವುದನ್ನು ತಿಳಿಸಬೇಕು. ಇಲ್ಲದೇ ಹೋದರೆ ಈ ಸಭೆಯಲ್ಲಿ ಕುಳಿತುಕೊಳ್ಳುವುದಕ್ಕೆ ಸಾಧ್ಯವಿಲ್ಲ.

MR. DEPUTY SPEAKER.—I agree with the hon. Member.

ಶ್ರೀ ಬಿ. ಪಿ. ಗಂಗಾಧರ್ (ತುಮಕೂರು).—ಸ್ವಾಮಿ, ನಾನು ಒಂದು ನೋಟೀಸ ಕೊಟ್ಟಿದ್ದೆ. ಆ ವಿಷಯ ಏನಾಯಿತು ?

ಉಪಾಧ್ಯಕ್ಷರು.—ನಿಮ್ಮ ನೋಟೀಸ್ ಮೇಲೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡಿದ್ದಾರೆ.

ಶ್ರೀ ಎಚ್. ಸಿದ್ದವೀರಪ್ಪ.—ಅಜೆಂಡಾದಲ್ಲಿರುವ ಸಬ್ಜಕ್ಟನ್ನು ಯಾವಾಗ ತೆಗೆದುಕೊಳ್ಳುತ್ತೀವೆ ಎನ್ನುವುದನ್ನು ತಿಳಿಸಿದರೆ ಅವಾಗ ಬರುತ್ತೇವೆ. ಅಷ್ಟು ಹೊತ್ತಿನವರೆಗೆ ಹೊರಗಡೆ ಇರುತ್ತೇವೆ.

ಶ್ರೀ ಬಿ. ಪಿ. ಗಂಗಾಧರ್.—ಸ್ವಾಮಿ, ತುಮಕೂರು ಟೌನಿನ ವಾಟರ್ ಸಪ್ಲೈ ಬಗ್ಗೆ ½ಗಂಟೆ ಡಿಸ್ಕಷನ್‌ಗೆ ನೋಟೀಸ್ ಕಳುಹಿಸಿದ್ದೆ. ಅದು 3-4 ಸಾರಿ ಅಜೆಂಡಾದಲ್ಲಿ ಬಂದಿತ್ತು, ಆದರೆ ಡಿಸ್ಕಷನ್ ದಿವಸವೇ ಸಭೆಯು ಕಾರ್ಯಕಲಾಪಗಳು ರಾತ್ರಿ 8-8½ ಗಂಟೆಯಾಗಿ ಬಹಳ ವೇಳೆ ಆದುದರಿಂದ ಅದು ತಪ್ಪಿಹೋಯಿತು. ಸೋಮವಾರ ಒಂದು ದಿವಸವೇ ಈ ಸಭೆ ನಡೆಯುವುದರಿಂದ ಆ ದಿನ ಬೇರೆ ಸಬ್ಜಕ್ಟ್‌ಗಳೂ ಕೂಡ ಇರುವುದರಿಂದ ಈ ವಿಷಯವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವೇ ? ನಾನು ಯಾವಾಗ ಕೇಳಿದರೂ ನಾಳೆ ಬರುತ್ತದೆ ಎಂದು ಹೇಳಿದರೆ ನಾವು ತಮ್ಮ ಬಗ್ಗೆ ಏನು ತಿಳಿದುಕೊಳ್ಳಬೇಕು.

ಉಪಾಧ್ಯಕ್ಷರು.—ಸೋಮವಾರ ನೋಡೋಣ.

* * * Matter not recorded as ordered by the Chair.

ಶ್ರೀ ಸದಾಶಿವಪ್ಪ ಪಾಟೀಲ್ (ದೇವದುರ್ಗ).—ಸ್ವಾಮಿ, ನಾನು ಒಂದು ಕಾಲ್ ಅಟೆನ್‌ಷನ್ ಮೋಷನ್ ಕಳುಹಿಸಿದ್ದೆ. ರಾಯಚೂರು ಡಿಸ್ಟ್ರಿಕ್ಟ್‌ನಲ್ಲಿ 1 ಲಕ್ಷ ಎಕರೆಗೆ ನೀವು ಕೊಟ್ಟಂಥ ಹೈಬ್ರಿಡ್ ಸೀಡ್ಸ್ ಬಿತ್ತನೆ ಆಗಿದೆ. ಈಗ ಅದಕ್ಕೆರ್ಲಾ ಸ್ಪ್ರೇ ಮಾಡಬೇಕಾಗುತ್ತದೆ. ಇಲ್ಲದೇ ಹೋದರೆ ಆ ಕ್ರಾಪ್ ಎರ್ರಾ ಫ್ಯೆಲ್ಯೂರ್ ಆಗುತ್ತದೆ. ಅದುದರಿಂದ ದಯವಿಟ್ಟು ನಾನು ಕೊಟ್ಟಿರತಕ್ಕ ಕಾಲ್ ಅಟೆನ್‌ಷನ್ ನೋಟಿಸನ್ನು ಸೋಮವಾರ ತೆಗೆದುಕೊಂಡು ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ನೋಡೋಣ.

ಶ್ರೀ ಕೆ. ಪಿ. ನಾಡಗೌಡ (ಮುಧೋಳ್).—ಸ್ವಾಮಿ, ಕರ್ನಾಟಕ ಯೂನಿವರ್ಸಿಟಿಗೆ ಶ್ರೀಮಾನ್ ಪಾಟೀಲ್ ಪುಟ್ಟಪ್ಪನವರನ್ನು ನಾಮಕರಣ ಮಾಡಿದ ಬಗ್ಗೆ ನನ್ನ ಒಂದು ಪ್ರಶ್ನೆಯನ್ನು ಹೆರ್ಡ್ ಓವರ್ ಮಾಡಿದ್ದಾರೆ. ಅದು ಸೋಮವಾರ ಬರುವುದಕ್ಕೆ ಸಾಧ್ಯವಾಗುತ್ತದೆಯೇ?

ಉಪಾಧ್ಯಕ್ಷರು.—ಹೆರ್ಡ್ ಓವರ್ ಪ್ರಶ್ನೆಯನ್ನು ಸೋಮವಾರ ತೆಗೆದುಕೊಳ್ಳೋಣ.

Papers laid on the Table

Sri M. RAJASEKHARA MURTHY (Minister for Industries, Information and Publicity).—Sir, I beg to lay on the Table of the House :

"A copy of the Government of India Scheme for financing craftsmen and qualified entrepreneurs in pursuance of his promise given on 21-1-1970 in reply to Starred question No. 42 by Sri N. A. Channe Gowda during Seventh Session."

Mr. DEPUTY SPEAKAR.—The Paper is laid.

Report of the Committee on Government Assurances

Sri A. R. PANCHAGAVI.—Sir, I beg to present :

"The Fourth Report of the Committee on Government Assurances."

Mr. DEPUTY SPEAKER.—Report is presented.

Report of the Mysore Public Service Commission

Sri H. SIDDAVEERAPPA.—Sir, I beg to move :

"That the Report of the Mysore public Service Commission for the year 1966-67 laid on the Table of the House on 12th October, 1970 be taken into consideration."

Mr. DEPUTY SPEAKER.—Motion moved :

"That the Report of the Mysore Public Service Commission for the year 1966-67 laid on the Table of the House on 12th October, 1970 be taken into consideraion."

Sri H. SIDDAVEERAPPA (Harihar).—Sir, I do not want to take much time because I would like to give opportunity to other friends who would like to participate in discussion on this important subject.